
# ೧೭. ಕಸಬುಗಾರರು



ಈತ ಶರಣ

ಶರಣ ಶಿಂಧೆವಾಡಿ ಊರಿನ ಕುಂಬಾರ.
ಇವನು ಆರಲಿನಿಂದ ಗಡಿಗೆ-ಮಡಿಕೆ ತಯಾರಿಸುವನು.
ಶರಣನು ತಿಗರಿಯಿಂದ ಗಡಿಗೆ ಮಡಿಕೆ ಬಹಳ ಸುಂದರ.
ಅವನು ಸಾತಾರಾದ ಪೇಟೆಗೆ ಹೋಗಿ ಗಡಿಗೆ- ಮಡಿಕೆ ಮಾರುವನು.



ಈತ ಭರಮ

ಭರಮ ಹೊಸೂರಿನ ಬಡಿಗ.
ಭರಮ ಕೊರಡಿನಿಂದ ಸಾಮಾನು ತಯಾರಿಸುವನು.
ಕಿರಿಯರಿಗಾಗಿ ಆಟಿಗೆ ತಯಾರಿಸುವನು.
ಆಟಿಗೆಗಳು ನೋಡಲು ಬಹಳ ಅಂದ.



ನಾರಾಯಣ

ಈತ ನಾರಾಯಣ
ನಾರಾಯಣನು ನೇಕಾರ
ನಾರಾಯಣನು ನೂಲಿನಿಂದ ಬೇರೆ ಬೇರೆ
ಅರಿವೆಗಳನು ನೇಯುವನು.



ಗೋಪಾಲ

ಈತ ಗೋಪಾಲ
ಗೋಪಾಲ ಗೌಳಿಗ. ಇವನು ಹಸುವಿನ ಹಾಲು ಕರೆಯುವನು.
ಹಲಸೂರಿನ ಪೇಟೆಗೆ ಹೋಗಿ ಹಾಲು ಮಾರುವನು.
ಮನೆಗೆ ಬೇಕಾಗುವ ಸಾಮಾನು ತರುವನು.
ಮನೆಯವರೊಡನೆ ಸುಖವಾಗಿ ಬಾಳುವನು.

## ಅಭ್ಯಾಸ

**೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ಕುಂಬಾರನು ಏನು ತಯಾರಿಸುವನು ?

___________________________________

___________________________________

ಆ) ಆಟಿಗೆ ಸಾಮಾನುಗಳನ್ನು ಯಾರು ತಯಾರಿಸುವರು ?

___________________________________

___________________________________

ಇ) ಅರಿವೆಗಳನ್ನು ಯಾರು ನೇಯುವರು ?

___________________________________

___________________________________

ಈ) ಗೌಳಿಗನು ಹಾಲನ್ನು ಎಲ್ಲಿ ಮಾರುವನು ?

___________________________________

___________________________________

ಉ) ಕಸಬುಗಾರರ ಹೆಸರು ಬರೆಯಿರಿ.

___________________________________

___________________________________

**೨) ಹೊಂದಿಸಿ ಬರೆಯಿರಿ.**

| | | |
|---|---|---|
| ೧) ಭರಮ | – | ಬಟ್ಟೆ |
| ೨) ಗೌಳಿಗ | – | ಶರಣ |
| ೩) ಕುಂಬಾರ | – | ಹಾಲು |
| ೪) ನೇಕಾರ | – | ಬಡಿಗ |

**೩) ಹಸ್ತಲಿಖಿತ ಭಾಗವನ್ನು ಓದಿರಿ.**

ಈ ಆಕಳು ರಾಮನ ಆಕಳು. ರಾಮನ ಆಕಳ ಮೈ ಬಿಳಿದು. ರಾಮನು ಆಕಳ ಮೈ ತೊಳೆಯುವನು. ಆಕಳಿಗೆ ಮೇವು ತಿನಿಸುವನು. ನೀರು ಕುಡಿಸುವನು.

ಆಕಳು ಹಾಲು ಕೊಡುವುದು. ರಾಮನ ಮಗ ಬಸವ ಹಾಗು ಮಗಳು ರೇವತಿ. ಅವರು ಆಕಳ ಹಾಲು ಕುಡಿಯುವರು. ಆಕಳ ಸೆಗಣಿ, ಗೋಬರ ಅನಿಲ, ವಿಭೂತಿ ತಯಾರಿಸಲು ಹಾಗೂ ಮನೆ ಸಾರಿಸಲು - ಹೀಗೆ ನಮಗೆ ಬಹು ಉಪಯೋಗಿಯಾಗಿರುವುದು.

**ಉಪಕ್ರಮ**

ಹಳ್ಳಿಯ ಕಸಬುಗಾರರ ಮನೆಗೆ ಭೆಟ್ಟಿ ನೀಡಿ ಅವರ ಜೀವನ ಮತ್ತು ಕೆಲಸಗಳ ಬಗ್ಗೆ ತಿಳಿದುಕೊಳ್ಳಿರಿ.